

ಆಲದ ಮರದಡಿ 'ಮಂತ್ರ ಮಾಂಗಲ್ಯ' ಪದ್ಧತಿಯಡಿ ಕಮಲೇಶ್–ಮೈತ್ರಿ ಮದುವೆ

ಅದ್ದೂರಿ ಮದುವೆಗಳು ಜನರ ಬಡತನದ ಮಟ್ಟವನ್ನು ಹೆಚ್ಚಿಸುವುದಲ್ಲದೇ, ಮೌಢ್ಯಕ್ಕೂ ಅವಕಾಶ ಕಲ್ಪಿಸುತ್ತವೆ ಎನ್ನುವುದು ವೈಚಾರಿಕ ಮತ್ತು ಪ್ರಗತಿಪರರ ಆಲೋಚನೆ. ಅದಕ್ಕಾಗಿ ಪರ್ಯಾಯ ಮಾರ್ಗಗಳನ್ನು ಇವರ ಆಲೋಚನೆಗಳು ಶೋಧಿಸಿವೆ. ಹೆಚ್ಚು ಖರ್ಚು ಮನುಷ್ಯನ ಮನೋಸ್ಥಿತಿಯನ್ನೇ ಭ್ರಷ್ಟಗೊಳಿಸುತ್ತದೆ ಎನ್ನುವ ವಿಶ್ಲೇಷಣೆ ಸರಳ ಮದುವೆಯ ಹಿಂದಿದೆ. ಖರ್ಚಿಲ್ಲದೆ ಅಥವಾ ಕನಿಷ್ಠ ಖರ್ಚಿನಲ್ಲಿ ನಡೆಯುವ ಮದುವೆಗಳು ಯುವಪ್ರೇಮಿಗಳಿಗೆ ಆಪ್ತವೂ ಆಕರ್ಷಕವೂ ಆಗಿರುವುದರಿಂದ, ಈ ಆಚರಣೆಗಳು ಕ್ರಾಂತಿಯ ಕಿಡಿಯಂತೆ ಗೋಚರಿಸುವುದೂ ಇದೆ.

ಸರಳ ಮದುವೆಗಳಿಗೆ ಸಮಾಜದ ಆರೋಗ್ಯದ ದೃಷ್ಟಿಯಿಂದ ವಿಶೇಷ ಮಹತ್ವವಿದೆ. ಮಕ್ಕಳ ಮದುವೆ ಮಾಡುವುದು ಪೋಷಕರ ಪಾಲಿಗೆ ಮಹತ್ವದ ಜವಾಬ್ದಾರಿ. ಮಕ್ಕಳ ಪಾಲನೆ ಮತ್ತು ಬೆಳೆಸುವ ರೀತಿಗಿಂತ ಮದುವೆಯೇ ಮುಖ್ಯ ಎನ್ನುವಂತೆ ಸಮಾಜದ ರೀತಿನೀತಿಗಳು ಬಿಗಿಗೊಳ್ಳುತ್ತಿವೆ. ವ್ಯವಸ್ಥೆ ಪ್ರೋತ್ಸಾಹಿಸುವ ಸಜಾತಿ–ಸಧರ್ಮಗಳ ಮದುವೆಗಳ ಹೊರತಾಗಿ ಗಂಡು–ಹೆಣ್ಣಿನ ಅಪೇಕ್ಷೆಯಂತೆ ನೆರವೇರುವ ಮದುವೆ ಹೆಚ್ಚು ಮಹತ್ವದ್ದಾಗಿದೆ.

**ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು**
**ಶಿವಂಗೆ.**
**ಸತಿಪತಿಗಳೊಂದಾಗದವನ ಭಕ್ತಿ**
**ಅಮೃತದೊಳು ವಿಷ ಬೆರೆದಂತೆ ಕಾಣಾ!**
**ರಾಮನಾಥ**

ಭಕ್ತಿ ಮತ್ತು ದಾಂಪತ್ಯದ ಅವಿನಾಭಾವ ಸಂಬಂಧದ ಬೆಸುಗೆ ದೇವರು ಮೆಚ್ಚುವಂತೆ ಇರಬೇಕು ಎನ್ನುವ ಆಶಯ ಆದ್ಯ ವಚನಕಾರ ಜೇಡರ ದಾಸಿಮಯ್ಯನದು. ಇದು ಮದುವೆಯ ಸಂಭ್ರಮಕ್ಕಿಂತ ಹೆಚ್ಚಾಗಿ ಬದುಕುವ ರೀತಿ, ಹಾಗೂ ದಾಂಪತ್ಯದಲ್ಲಿ ಪ್ರೀತಿಯ ಮಹತ್ವವನ್ನು ಹೇಳುತ್ತದೆ. ಇಲ್ಲಿ ಬದುಕು ಮುಖ್ಯ ಆಗುತ್ತದೆಯೇ ಹೊರತು ಮದುವೆಯನ್ನು ಮಾಡುವ ರೀತಿ ನೀತಿಗಳಲ್ಲ ಎನ್ನುವ ಅಂಶವನ್ನು ಗಮನಿಸಬೇಕು.

## ಅರ್ಥಪೂರ್ಣ 'ಮಂತ್ರ ಮಾಂಗಲ್ಯ'

ಮಂತ್ರ ಮಾಂಗಲ್ಯ ಪರಿಕಲ್ಪನೆಯನ್ನು ರೂಪಿಸಿ ಅದನ್ನು ಆಚರಣೆಗೆ ತಂದ ಶ್ರೇಯಸ್ಸು ರಾಷ್ಟ್ರಕವಿ ಕುವೆಂಪು ಅವರಿಗೆ ಸಲ್ಲುವಂತಹದ್ದು. ಸಾಂಪ್ರದಾಯಿಕ ಮತ್ತು ಪೌರೋಹಿತ್ಯದ ಅದ್ದೂರಿ ಮದುವೆಗೆ ಪರ್ಯಾಯವಾಗಿ 'ಮಂತ್ರ ಮಾಂಗಲ್ಯ' ಪರಿಕಲ್ಪನೆಯನ್ನು ಅವರು ಆವಿಷ್ಕರಿಸಿದ್ದಾರೆ. 'ಮಂತ್ರ ಮಾಂಗಲ್ಯ' ವಿವಾಹವಿಧಿಗಾಗಿ ಕುವೆಂಪು 20 ಅಂಶಗಳ ಸೂತ್ರವನ್ನು ಬರೆದಿದ್ದಾರೆ.

ಮಂತ್ರ ಮಾಂಗಲ್ಯ ಪದ್ಧತಿಯಲ್ಲಿ, ವಧು–ವರ ಪರಸ್ಪರ ಒಲವಿನ ಒಡಂಬಡಿಕೆಯ ಪ್ರಮಾಣವನ್ನು ಸ್ವೀಕರಿಸಿ, ದಾಂಪತ್ಯದ ಹೊಸ ಬಾಳಿಗೆ ಹೆಜ್ಜೆ ಇಡುತ್ತಾರೆ. ಇದು ಸರಳ ಮಾತ್ರವಲ್ಲ, ಮದುವೆಯ ಸಾಂಪ್ರದಾಯಿಕ ಮಾದರಿಗೆ ಪರ್ಯಾಯವೂ ಹೌದು. 'ಮಂತ್ರ ಮಾಂಗಲ್ಯ' ಜಾತಿ ಮತ್ತು ಧರ್ಮವನ್ನು ಮೀರಿ, ವರದಕ್ಷಿಣೆಯಂಥ ಶೋಷಣೆಗೆ ಕೊನೆ ಹಾಡಲು ಕ್ರಾಂತಿಕಾರಕ ಬದಲಾವಣೆಗೆ ಮುನ್ನುಡಿಯೂ ಆಗಿದೆ. ಹಲವು ವಿದ್ಯಾವಂತ ತರುಣ ತರುಣಿಯರಿಗೆ ಮಂತ್ರ ಮಾಂಗಲ್ಯ ನೆಚ್ಚಿನ ಆಯ್ಕೆಯಾಗಿದೆ.

ಸರಳ ಮದುವೆ ಕುರಿತು ಕುವೆಂಪು ಹೇಳಿರುವುದು ಹೀಗೆ: 'ನೀವು ಲೋಕವನ್ನಾಗಲಿ ಸಮಾಜವನ್ನಾಗಲಿ ಬದಲಾಯಿಸುವ ಯತ್ನ–ಅಗತ್ಯ ಇಲ್ಲ. ನೀವು ಪರಿವರ್ತನೆ ಆಗದೆ ಏನೂ ಬದಲಾಗುವುದಿಲ್ಲ. ನಿಮ್ಮಲ್ಲಿ ಪ್ರಾಮಾಣಿಕತೆ ಇದ್ದರೆ, ನಾನು ಹೇಳುವ ಸಣ್ಣ ಸುಧಾರಣೆ ನಿಮ್ಮ ಜೀವನದಲ್ಲಿ ಮಾಡಿಕೊಳ್ಳಿ. ನಿಮ್ಮ ಮದುವೆಯನ್ನು ವರದಕ್ಷಿಣೆ ತೆಗೆದುಕೊಳ್ಳದೆ ಶಾಸ್ತ್ರ ಆಚಾರಗಳಿಗೆ ಕಟ್ಟು ಬೀಳದೆ, ನಿಮ್ಮ ಅಂತಸ್ತಿನ ಪ್ರದರ್ಶನ ಮಾಡದೆ, ಸರಳವಾಗಿ ಮಾಡಿಕೊಳ್ಳಿ. ಇದ್ಯಾವ ಮಹಾಕ್ರಾಂತಿ ಎಂದು ನಿಮಗನಿಸಬಹುದು. ನಿಮ್ಮ ಜೀವನದಲ್ಲಿ ಒಮ್ಮೆಯಾದರೂ ನೀವು ನಂಬಿದ ಆದರ್ಶಗಳ ಮೌಲ್ಯಗಳ ಪರವಾಗಿ ನಿಂತು ಗೊಡ್ಡು ಸಂಪ್ರದಾಯಗಳನ್ನು ಎದುರಿಸಿ ನಾವು ನಂಬಿದ ಆದರ್ಶಗಳ ಪರವಾಗಿ ನಿಲ್ಲುವ ಅದ್ಭುತ ಅನುಭವ ಆನಂದ ಎಂದಾದರೂ ನಿಮಗೆ ಗೊತ್ತಾಗುತ್ತದೆ'.

ಮಂತ್ರ ಮಾಂಗಲ್ಯಕ್ಕೆ ತೇಜಸ್ಸು ತುಂಬಿದ ಮೊದಲ ಮದುವೆ, ಕುವೆಂಪು ಅವರ ಪುತ್ರ ಪೂರ್ಣಚಂದ್ರ ತೇಜಸ್ವಿ ಹಾಗೂ ರಾಜೇಶ್ವರಿ ಅವರದು. ಪ್ರೇಮಿಗಳಾಗಿದ್ದ ತೇಜಸ್ವಿ–ರಾಜೇಶ್ವರಿ 'ಮಂತ್ರ ಮಾಂಗಲ್ಯ'ದ ಮೂಲಕ ವಿವಾಹವಾದುದು, ಅನೇಕರಿಗೆ ಸ್ಫೂರ್ತಿಯಾಯಿತು. ಪ್ರಗತಿಪರ ಚಿಂತನೆಯ, ಜಾತಿವಿನಾಶಕ್ಕೆ ತುಡಿಯುವ, ಅಂತರ್ಜಾತಿ, ಅಂತರ್ಧರ್ಮೀಯ ಮದುವೆಗಳಿಗೆ ಹಂಬಲಿಸುವವರಿಗೆ 'ಮಂತ್ರ ಮಾಂಗಲ್ಯ' ಪೂರಕವಾಯಿತು. ಅದರ ಪರಿಣಾಮ, ಇದು ಚಳವಳಿಯಂತೆ ನಾಡಿನಾದ್ಯಂತ ಈಗಲೂ ಚಾಲ್ತಿಯಲ್ಲಿದೆ. ಕುವೆಂಪು ಅವರಿಂದ ಪ್ರೇರಿತರಾದ ಯುವಕ ಯುವತಿಯರು 'ಮಂತ್ರ ಮಾಂಗಲ್ಯ'ದ ಮೂಲಕ ದಾಂಪತ್ಯದ ಅಂಗಳ ಪ್ರವೇಶಿಸುತ್ತಿದ್ದಾರೆ.

## ಬಾಲ್ಕಿಯಲ್ಲಿ ಶರಣತತ್ವದ ಮದುವೆ

ಕುವೆಂಪು ಅವರ 'ಮಂತ್ರ ಮಾಂಗಲ್ಯ'ವನ್ನು ನೆನಪಿಸುವ ಪರಿಕಲ್ಪನೆ 'ವಚನ ಮಾಂಗಲ್ಯ'.

ಬೀದರ್ ಜಿಲ್ಲೆಯ ಬಾಲ್ಕಿಯಲ್ಲಿರುವ ಹಿರೇಮಠ ಸಂಸ್ಥಾನ ಸರಳ ಮದುವೆಯನ್ನು ಉತ್ತೇಜಿಸುತ್ತದೆ.